ಈ ದಿನ ದಿನಾಂಕಃ 28-03-2023 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ</u>

ಸರ್ವೆ ನಂ.86/1 ಮೂಲತಃ ಪ್ರತಿವಾದಿಯ ತಂದೆ ರಂಗಪ್ಪನವರಿಗೆ ಸೇರಿದ್ದು ಎಂದರೆ ಸಾಕ್ಷಿಯು ಅವರ ಪಾಲಿನ ಆಸ್ತಿ ಅವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಸರ್ವೆ ನಂ.86 ರಲ್ಲಿ ದಾವಾ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.86/1 ರಲ್ಲಿ 2 ಎಕರೆ 19 ಗುಂಟೆ ಜಮೀನು ಕಾಲುವೆಗೆ ಸ್ವಾದೀನವಾಗಿರುತ್ತದೆ ಎಂದಾರೆ ಸಾಕ್ಷಿಯ ಅಷ್ಟೊಂದು ಪ್ರದೇಶ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಮತ್ತು ಸ್ವಾದೀನವಾದ ಜಮೀನು ರಂಗಪ್ಪನವರ ಹಿಸ್ಸೆಗೆ ಸೇರಿದ್ದಾಗಿರುತ್ತದೆ. ಸದರಿ ಜಮೀನಿನ ಪಹಣಿಯನ್ನು ನಾನು ನೋಡಿಲ್ಲ.

2. ಸರ್ವೆ ನಂ.86/1 ರ ಪಹಣಿಯಲ್ಲಿ 2 ಎಕರೆ 19 ಗುಂಟೆ 'ಅ' ಖರಾಬು ಇರುತ್ತದೆ ಎಂದರೆ ಸರಿ. 2 ಎಕರೆ 35 ಗುಂಟೆ ಪೂರ್ವಕ್ಕೆ ಕಾಲುವೆ, ಪಶ್ಚಿಮಕ್ಕೆ ಮನೆಗಳು, ಉತ್ತರಕ್ಕೆ ಕಾಲೋನಿ, ದಕ್ಷಿಣಕ್ಕೆ ಪಂಚಾಯಿತಿ ರಸ್ತೆ ಇರುತ್ತದೆ. ಈ ಮೇಲೆ ಹೇಳಿದ ಚೆಕ್ಕುಬಂದಿಯ ಮಧ್ಯದಲ್ಲಿ ದಾವಾ ಸ್ವತ್ತು ಇರುತ್ತದೆ ಎಂದರೆ ಸರಿ. ರಂಗಪ್ಪನವರಿಗೆ ಬಸವರಾಜಪ್ಪ, 1 ನೇ ಪ್ರತಿವಾದಿ, ಹನಮಂತಮ್ಮ ಮತ್ತು ತಿಪ್ಪಮ್ಮ ಎಂಬ 4 ಜನ ಮಕ್ಕಳು ಎಂದರೆ ಸರಿ. ಬಸವರಾಜಪ್ಪನವರ ಹೆಂಡತಿ ಮಕ್ಕಳು ಮತ್ತು 1 ನೇ ಪ್ರತಿವಾದಿ ಸರ್ವೆ ನಂ.86/1 ರಲ್ಲಿನ ಆಸ್ತಿಯಲ್ಲಿ ವಾಸವಿದ್ದಾರೆ ಎಂದರೆ ಸರಿ.

3. ಪ್ರತಿವಾದಿ ವಾಸವಿರುವ ಮನೆಯ ಪೂರ್ವಕ್ಕೆ ಗಂಗಪ್ಪನವರ ಮನೆ, ದಕ್ಷಿಣಕ್ಕೆ ದೇವೆಂದ್ರಪ್ಪನವರ ಮನೆ, ಉತ್ತರಕ್ಕೆ ಬೋವಿ ಕಾಲೋನಿ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತವೆ ಎಂದರೆ ಸರಿ. ಪ್ರತಿವಾದಿ ಪಂಚಾಯಿತಿಗೆ ಕಂದಾಯ ಕಟ್ಟುತ್ತಿದ್ದಾಳೆ ಎಂದರೆ ಸರಿಯಲ್ಲ.

4. ವಾದಿ ನನ್ನ ದೊಡ್ಡಪ್ಪ. ಸಾಕ್ಷಿಗೆ ವಾದಿ ಸಲ್ಲಿಸಿರುವ ದಾಖಲೆಗಳನ್ನು ತೋರೀಸಿ ಅದರಲ್ಲಿ ವಾದಿಯ ಆಸ್ತಿಗೆ ಸಂಬಂಧ ಪಟ್ಟ ಅಳತೆ ಮತ್ತು ಚೆಕ್ಕುಬಂದಿಗಳು ಇರುತ್ತವೆ ಎಂದು ಕೇಳಲಾಗಿ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ವಾದಿ ನನ್ನ ದೊಡ್ಡಪ್ಪನಾದ್ದರಿಂದ ಅವರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 12 ವರ್ಷಗಳಿಂದ ದಾವಾ ಸ್ವತ್ತಿನ ಚೆಕ್ಕುಬಂದಿ ಮಧ್ಯದಲ್ಲಿ ವಾಸವಿರುತ್ತಾರೆ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.